

‘ತೆಗೆದುನೋಡಿ’ ಎಂದ ನಗುತ್ತಾ, ನಾಜೂಕಾದ ತಿಳಿ ಗುಲಾಬಿ ರಂಗಿಗೆ ಹೂವಿನ ಕಸೂತಿಯಿದ್ದ ದುಬಾರಿ ಸೀರೆ... ಅಂತಹದ್ದೇ ಮತ್ತೊಂದು ಬಣ್ಣ ಫಾತುಮ್ಮಳಿಗೆ.

‘ಇದು ತಪ್ಪಾಗುತ್ತೆ ಇಲ್ಯಾಸ್ ಪಾಶಾ... ನಾವೇನಾಗ್ಬೇಕು ಅಂತ ಇದೆಲ್ಲ ತಂದ್‌ಕೊಡ್ತೀರ?’ ಎಂದ ಫಾತುಮ್ಮಳಿಗೆ, ‘ಏನಾಗಬೇಕು ಅಂದ್ರೆ... ಏನಾದ್ರು ಆಗೋಣ ಬಿಡಿ, ನೀವು ನಮ್ಗೆ ಅತ್ತೆ ಆಗಬಹುದಲ್ಲ’ ಎಂದು ಖತೀಜಾಳನ್ನೇ ನೋಡುತ್ತಾ. ಮೂವತ್ಮೂರು ವರ್ಷದ ಖತೀಜಾಳ ಕಿವಿ ಬಿಸಿಯಾಗಿ ಕೆಂಪೇರಿತು. ಬೆಳಕೆಂಚಿನಿಂದ ಇಳಿದು ಬರುತ್ತಿದ್ದ ಸೂರ್ಯನ ಬೆಳಕಿನಲ್ಲಿ ಅವಳ ಮುಖವನ್ನೇ ನೋಡಿದ ಇಲಿಯಾಸ, ‘ಪರವಾಗಿಲ್ಲ ಚೆನ್ನಾಗೇ ಇದಾಳೆ’ ಅಂದುಕೊಂಡ. ಅವನ ಮಾತಿನಿಂದ ದಿಗ್ಭ್ರಮೆ ಹಿಡಿದಂತೆ ಫಾತುಮ್ಮ, ‘ಇಲ್ಯಾಸ್‌ಪಾಶಾ... ನೀವೇನ್ ಹೇಳ್ತಿದೀರಿ... ಅವಳ ವಯಸ್ಸೇನು ನಿಮ್ಮ ವಯಸ್ಸೇನು? ನೀವು ನಮ್ಮವ್ರು ಅಂತ ನಾವು ನಿಮ್ಮನ್ನ ಮನೆಗೆ ಸೇರಿಸ್ಕೊಂಡ್ವಿ; ನಾವು ಅಂಥೋರಲ್ಲ. ಬಡತನ ಇದ್ರೂ ಮರ್ಯಾದೇಲಿ ಬದುಕಿದೀವಿ’ ಅಂದಳು. ಇಲ್ಯಾಸ್ ಸಾವಧಾನದಿಂದ, ‘ಅಯ್ಯೋ ವಯಸ್ಸೇನು ಮಾಡುತ್ತೆ? ನಾನೇನು ಕೇಳಬಾರದ್ದು ಕೇಳಿದ್ನ? ಖತೀಜಾನ ನಿಕಾಹ್ ಮಾಡ್ಕೋತೀನಿ ಅಂದೆ, ಅಷ್ಟೆ’ ಅಂದ. ‘ಅಲ್ಲ, ನಿಮ್ಗೆ ಎರಡು ಬೀಬಿ ಇದಾರೆ ಅಂದ್ರಿ?’ ಅಂದಾಗ, ‘ಇದಾರೆ, ಇಲ್ಲ ಅಂತ ಸುಳ್ ಹೇಳಿದ್ನ? ಶರೀಯನಲ್ಲಿ ನಾಕು ನಿಕಾಹ್ ಮಾಡ್ಕೋಬಹುದಲ್ವ? ನಿಮ್ಗೆ ಗೊತ್ತಿಲ್ದೆ ಇರೋದೇನಿದೆ?’ ಎಂದು ಸವಾಲೆಸೆದ. ‘ಇದಕ್ಕೆ ನಿಮ್ದು ಬೀವೀರು ಒಪ್ತಾರ?’ ಅಂದಾಗ, ‘ಅದ್ಹೆಂಗೆ ಒಪ್ಕೋತ್ತಾರೆ ನೀವೇ ಹೇಳಿ? ಅವ್ರಿಗೆ ನಾನೀಗ್ಲೇ ಹೇಳಿಲ್ಲ. ನಿಧಾನ ಹೇಳ್ತೀನಿ. ಹೆಂಗೂ ನರಸೀಪುರದಲ್ಲಿ ಮನೆ ಮಾಡಿದೀನಿ. ಖತೀಜಾ ಅಲ್ಲಿರ್ಲಿ. ನೀವೂ ನಮ್ಮ ಜೊತೆಗೆ ಬಂದಿರಿ. ನಾನು ಇಬ್ಬರನ್ನು ನೋಡ್ಕೋತೀನಿ’ ಎಂದಿದ್ದ. ಖತೀಜಾ ಪಟಕ್ಕಂತ, ‘ಅದೆಲ್ಲ ಆಗಲ್ಲ. ನಾನು ಅಮ್ಮಿ ಈ ಮನೆ ಬಿಟ್ಟು ಎಲ್ಲೂ ಬರಲ್ಲ. ನೀವೆ ಇಲ್ಗೆ ಬಂದು ಹೋಗಿ ಮಾಡಬೇಕಾಗುತ್ತೆ’ ಎಂದುಬಿಟ್ಟಳು. ಫಾತುಮ್ಮ ಅಚ್ಚರಿಯಿಂದ ಗಾಬರಿಗೊಂಡು ಮಗಳತ್ತ